# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1166
2. ಸದಸ್ಯರ ಹೆಸರು : ಶ್ರೀ ಸಿ.ಟಿ ರವಿ
3. ಉತ್ತರಿಸಬೇಕಾದ ದಿನಾಂಕ : 19-12-2024
4. ಉತ್ತರಿಸುವವರು : ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಚಿಕ್ಕಮಗಳೂರು ನಗರದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಎಷ್ಟು ಕಾಲುವೆಗಳು/ನಾಲೆಗಳು /ಕೆರೆಗಳು ಒತ್ತುವರಿ ಆಗಿವೆ; ಎಲ್ಲಿ, ಎಷ್ಟು ಪ್ರಮಾಣದಲ್ಲಿ ಒತ್ತುವರಿ ಆಗಿದೆ; (ಸಂಪೂರ್ಣ ವಿವರ ಒದಗಿಸುವುದು)</td><td>"ಸಣ್ಣ ನೀರಾವರಿ ಇಲಾಖಾಯಡಿಯಲ್ಲಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ 33 ಕೆರೆಗಳಿದ್ದು, ನಗರ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ 05 ಕೆರೆಗಳಿರುತ್ತದೆ.<br><br>1.ದಂಟರಮಕ್ಕಿ ಬಸವನಹಳ್ಳಿ ಕೆರೆ<br>2.ಕೋಟೆ ತಾವರೆಕೆರೆ<br>3.ಇಂದಾವರ ತಾವರೆಕೆರೆ<br>4.ಹಿರೇಮಗಳೂರು ದೊಡ್ಡಕೆರೆ<br>5.ಹನುಮನಕೆರೆ ಅಥವಾ ಹುಣಸವಳ್ಳಿ ಕೆರೆ<br>ಸದರಿ ಕೆರೆಗಳ ಒತ್ತುವರಿ ವಿವರ ಈ ಕೆಳಗಿನಂತಿರುತ್ತದೆ.<br><br>
<table>
<tr><th>ಕ್ರ. ಸಂ</th><th>ಕೆರೆಯ ಹೆಸರು</th><th>ಸರ್ವೆ ಕಾರ್ಯ ಆಗಿದೆಯೇ</th><th>ಒತ್ತವರಿ ವಿವರ (ಹೆಕ್ಟೇರ್‌ಗಳಲ್ಲಿ)</th><th>ಒತ್ತವರಿ ತೆರವಿನ ವಿವರ</th></tr>
<tr><td>1</td><td>ದಂಟರಮಕ್ಕಿ ಬಸವನಹಳ್ಳಿ ಕೆರೆ</td><td>ಪೂರ್ಣಗೊಂಡಿದೆ</td><td>0.00</td><td></td></tr>
<tr><td>2</td><td>ಕೋಟೆ ತಾವರೆಕೆರೆ</td><td>ಸರ್ವೆ ಕಾರ್ಯ ಕೈಗೊಳ್ಳಬೇಕು</td><td>-</td><td></td></tr>
<tr><td></td><td>ಇಂದಾವರ ತಾವರೆಕೆರೆ</td><td>ಪೂರ್ಣಗೊಂಡಿದೆ</td><td>0.00</td><td></td></tr>
<tr><td>3</td><td>ಹಿರೇಮಗಳೂರು ದೊಡ್ಡಕೆರೆ</td><td>ಪೂರ್ಣಗೊಂಡಿದೆ</td><td>2.92</td><td>ಒತ್ತುವರಿ ತೆರುವುಗೊಳಿಸಬೇಕು</td></tr>
<tr><td>4</td><td>ಹನುಮನಕೆರೆ ಅಥವಾ ಹುಣಸವಳ್ಳಿ ಕೆರೆ</td><td>ಪೂರ್ಣಗೊಂಡಿದೆ</td><td>0.56</td><td>ಒತ್ತುವರಿ ತೆರುವುಗೊಳಿಸಲಾಗಿದೆ</td></tr>
</table>
<br>ಮುಂದುವರೆದು ಚಿಕ್ಕಮಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿನ ಕಾಲುವೆಗಳು ಮತ್ತು ನಾಲೆಗಳ ಸರ್ವೇ ಕಾರ್ಯ ಕೈಗೊಂಡು ಒತ್ತುವರಿಯಾಗಿರಬಹುದಾದ ಕಾಲುವೆಗಳು ಮತ್ತು ನಾಲೆಗಳ ವಿಸ್ತೀರ್ಣವನ್ನು ಗುರುತಿಸಿಕೊಡಲು ತಹಶೀಲ್ದಾರ್, ಚಿಕ್ಕಮಗಳೂರು ರವರಿಗೆ ಉಪ ವಿಭಾಗದಿಂದ ಈಗಾಗಲೇ ಪತ್ರ ಸಂಖ್ಯೆ: 311, ದಿ: 08-05-2024 ಮತ್ತು 640 ದಿ: 15.11.2024 ರಂದು ಪತ್ರ ಬರೆಯಲಾಗಿದೆ. ಚಿಕ್ಕಮಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ ತಾಲ್ಲೂಕಿನ ಸರ್ವೆ ಕಾರ್ಯ ಪೂರ್ಣಗೊಂಡಿರುವ ಕೆರೆಗಳಲ್ಲಿ 02 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಕೆರೆಗಳಿಗೆ ತಹಶೀಲ್ದಾರ್ ರವರ ಕಛೇರಿಯಿಂದ ದಿನಾಂಕ ನಿಗಧಿಪಡಿಸಿದ ನಂತರ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.</td></tr>
<tr><td>ಆ</td><td>ಕಾಲುವೆಗಳು/ನಾಲೆಗಳು /ಕೆರೆಗಳ ಪಕ್ಕದಲ್ಲಿ ನಿಗದಿಪಡಿಸಿರುವ ಬಫರ್‌ಜೋನ್ ಎಷ್ಟು; (ವಿವರ ನೀಡುವುದು)</td><td>ಕೆರೆ ಸಂರಕ್ಷಣೆ ಪ್ರಾಧಿಕಾರದ ನಿಯಾಮಳಿಗಳನ್ವಯ ಕೆರೆಯ ಕಂದಾಯ ಗಡಿಯಿಂದ 30.00 ಮೀ ಗಳ ವರೆಗೆ ಬಫರ್‌ಜೋನ್ ವ್ಯಾಪ್ತಿಯಿರುತ್ತದೆ.<br><br>ನಗರಾಭಿವೃದ್ಧಿ ಇಲಾಖೆಯವತಿಯಿಂದ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ : ನಅಇ 11 ಬಿಎಂಆರ್ 2017 ದಿನಾಂಕ : 20.07.2019 ರಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶ ಆರ್ಕಾವತಿ</td></tr>
</table>

| | | |
|---|---|---|
| | | ಮತ್ತು ಕುಮುದ್ವತಿ ನದಿಗಳ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಬಫರ್ ಜೋನ್ ಅನ್ನು ಈ ಕೆಳಕಂಡಂತೆ ನಿಗದಿಪಡಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿನ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳಿಗೆ ಅವರವರ ವಲಯ ನಿಯಾಮವಳಿಗಳಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಆದೇಶಿಸಿದೆ.<br><br>➢ ಕೆರೆಗಳಿಗೆ 30 ಮೀ .<br>➢ ಪ್ರಾಥಮಿಕ ರಾಜ ಕಾಲುವೆಗೆ 30 ಮೀ.<br>➢ ಎರಡನೇ ಹಂತದ ರಾಜ ಕಾಲುವೆಗೆ 15 ಮೀ.<br>➢ ಮೂರನೇ ಹಂತದ ರಾಜ ಕಾಲುವೆಗೆ 10 ಮೀ. |
| ಇ | ಒತ್ತುವರಿಯಾಗಿರುವ ಕೆರೆಗಳು/ ನಾಲೆಗಳು/ ಕಾಲುವೆಗಳ ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈವರೆಗೆ ಎಷ್ಟು ಒತ್ತುವರಿ ತೆರವುಗೊಳಿಸಲಾಗಿದೆ; (ಸಮಗ್ರ ವಿವರ ನೀಡುವುದು) | ಚಿಕ್ಕಮಗಳೂರು ತಾಲ್ಲೂಕಿನ ಸರ್ವೆ ಕಾರ್ಯ ಪೂರ್ಣಗೊಂಡಿರುವ ಕೆರೆಗಳಲ್ಲಿ 02 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಕೆರೆಗಳಿಗೆ ತಹಶೀಲ್ದಾರ್ ರವರ ಕಛೇರಿಯಿಂದ ದಿನಾಂಕ ನಿಗಧಿಪಡಿಸಿದ ನಂತರ ಮತ್ತು ಅನುದಾನದ ಲಭ್ಯತೆಯ ಅಧಾರದ ಮೇಲೆ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |
| ಈ | ಒತ್ತುವರಿ ತೆರವುಗೊಂಡ ಪ್ರದೇಶವನ್ನು ರಕ್ಷಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಒತ್ತುವರಿ ತೆರವುಗೊಂಡ ಪ್ರದೇಶವನ್ನು ಬಯೋ ಫೆನ್ಸಿಂಗ್/ಬೌಂಡ್ರಿ ಟ್ರೆಂಚ್ ಅಳವಡಿಸುವ ಮೂಲಕ ರಕ್ಷಿಸಲಾಗುವುದು. ಮುಂದುವರೆದು ಒತ್ತುವರಿ ತೆರುವುಗೊಂಡ ನಂತರದಲ್ಲಿ ಬಯೋ ಪ್ಲಾಂಟೇಶನ್ ಅನ್ನು ಅರಣ್ಯ ಇಲಾಖೆ ವತಿಯಿಂದ ಕೈಗೊಳ್ಳಲು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ ಪತ್ರ ಸಂಖ್ಯೆ:2320 ದಿ:30-09-2024 ರಂದು ಅರಣ್ಯ ಇಲಾಖೆಗೆ ಪತ್ರ ಬರೆಯಲಾಗಿರುತ್ತದೆ. |

ಕಡತ ಸಂಖ್ಯೆ: ಎಂಐಡಿ 141 ಎಲ್‌ಸಿಕ್ಯೂ 2024

(ಎನ್.ಎಸ್.ಬೋಸರಾಜು)
ಸಣ್ಣ ನೀರಾವರಿ ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು